ಕಥೆ

# ಹೇಳಲಾರದು ಮನ ತಾಳಲಾರದು

■ ಅನು ಬೆಳ್ಳೆ

ಹೇಳಲೇಬಾರದೆಂದುಕೊಂಡಿದ್ದ ವಿಷಯ ಹೇಳಲೇಬೇಕಾದ ಅನಿವಾರ್ಯತೆ ಎದುರಾದಾಗ ಹೇಳಿಬಿಟ್ಟು ಹಗುರಾದೇನು ಎಂಬ ಭಾವನೆ ಅವಳಿಗೆ ಯಾವತ್ತೂ ಬರಲೇ ಇಲ್ಲವೆನ್ನುವಂತೆ ಸದಾ ಅಂತರ್ಮುಖಿಯಾಗಿರುತ್ತಿದ್ದ ಹಂಸಿನಿ ನನ್ನನ್ನು ಎದುರಿಗೆ ಕೂರಿಸಿ ಹೇಳಿದ್ದು ಇಷ್ಟೇ, ‘ನೋಡು, ನಿನಗೆ ನಾನು ಭಾರವಾಗಿದ್ದೇನೆ ಅನಿಸಿದರೆ ಹೇಳು, ಕೆರೇನೋ ಬಾವೀನೋ ನೋಡಿಕೋತಿನಿ. ಇನ್ನೊಬ್ಬರಿಗೆ ಹೊರೆಯಾಗಿ ಬದುಕೋ ಆಸೆ ನನಗೂ ಇಲ್ಲ. ಒಂದೇ ಹೊಟ್ಟೆಯಲ್ಲಿ ಹುಟ್ಟಿ ಬಂದಿದ್ದೀವಿ ಅನ್ನೋ ಕಾರಣಕ್ಕೆ ಇಲ್ಲಿಗೆ ಬಂದೆ’. ತಟಕ್ಕನೆ ಎದ್ದು ಒದ್ದೆಯಾದ ಕಣ್ಣುಗಳನ್ನು ಒರೆಸಿಕೊಂಡು ಒಳಗೆ ಓಡಿದಳು.

ಎಷ್ಟೊಂದು ಧೈರ್ಯವಂತೆಯಾಗಿದ್ದ ಅವಳಿಂದ ಈ ರೀತಿಯ ಮಾತುಗಳನ್ನು ನಾನು ನಿರೀಕ್ಷಿಸಿಯೂ ಇರಲಿಲ್ಲ. ಅವಳು ಮನೆಯಲ್ಲಿ ಯಾರ ಬಳಿಯೂ ಏನೂ ಹೇಳಿಕೊಂಡಿರುವುದು ನನ್ನ ಗಮನಕ್ಕೆ ಬಂದೇ ಇಲ್ಲ. ಹೀಗೆ ಧೋ ಎಂದು ಸುರಿಯುವ ಮಳೆಗೆ ಅಷ್ಟು ದೂರದ ಪುಣೆಯಿಂದ ಬಸ್ಸಿನಲ್ಲಿ ಒಬ್ಬಳೇ ಬಂದಿಳಿದಾಗ ನಾವೆಲ್ಲಾ ಎಷ್ಟೊಂದು ಖುಷಿಪಟ್ಟಿದ್ದೆವು. ಮದುವೆಯಾಗಿ ಗಂಡನ ಮನೆ ಸೇರಿದವಳು ವರ್ಷ ಕಳೆದ ಮೇಲೆಯೇ ಮನೆಗೆ ಬರುತ್ತಿರುವುದು. ಗಂಡನಾದರೂ ಒಂಚೂರು ಪುರುಸೊತ್ತಿಲ್ಲದ ಮನುಷ್ಯ. ಅವಳು ಅಮ್ಮನಿಗೆ ಫೋನಾಯಿಸುವಾಗಲೆಲ್ಲಾ, ‘ಗಂಡನ ಹತ್ರ ಕರ್ಕೊಂಡು ಬರೋದಿಕ್ಕೆ ಹೇಳು’ ಅಂದ್ರೆ, ‘ಅವಳನ್ನು ಬಸ್ಸಿಗೆ ಹತ್ತಿಸಿ ಬಿಡುತ್ತೇನೆ, ಬರ್ತಾಳೆ’ ಎಂದು ಅಮ್ಮನ ಮಾತಿಗೂ ಮರ್ಯಾದೆ ಇಲ್ಲದಂತೆ ಹಗುರವಾಗಿ ಮಾತಾಡಿದ್ದ ಅವಳ ಗಂಡ. ಇದು ಅವಳ ಗಂಡನ ಬೇಜವಾಬ್ದಾರಿಯೋ; ಇಲ್ಲ, ಅವನಿಗೆ ಹೆಂಡತಿಯನ್ನು ತವರು ಮನೆಗೆ ಕಳುಹಿಸುವುದಕ್ಕೆ ಮನಸ್ಸಿಲ್ಲದೆ ಹೇಳುವುದೋ ತಿಳಿಯಲಿಲ್ಲ. ಅಂತೂ ಧೈರ್ಯದಿಂದ ಒಬ್ಬಳೇ ಬಂದು ಬಿಟ್ಟಳಲ್ಲ ಎಂದು ಮನೆಯವರೆಲ್ಲಾ ಅವಳನ್ನು ಆಡಿಕೊಂಡದ್ದೇ ಬಂತು. ಮನೆಗೆ ಬಂದ ಮೇಲೆ ಪುಣೆಗೆ ಫೋನ್ ಮಾಡಿದ್ದನ್ನು ಯಾರು ನೋಡಿಲ್ಲ, ಕೇಳಿಸಿಕೊಂಡಿಲ್ಲ. ಆರು ತಿಂಗಳಾದರೂ ಅವಳು ಗಂಡನ ಮನೆಗೆ ವಾಪಸು ಹೋಗುವ ಸೂಚನೆಯಿರಲಿಲ್ಲ. ಹಾಗಂತ ಅಪ್ಪ ಅಮ್ಮ ಅಥವಾ ಮನೆಯವರ್ಯಾರು ಅವಳನ್ನು ಯಾಕೆ, ಏನೂಂತ ವಿಚಾರಿಸಲೂ ಇಲ್ಲ. ಒಂದು ದಿನ ಸಂಜೆ ನಾವೆಲ್ಲಾ ಅಂಗಳದಲ್ಲಿ ಕುಳಿತು ಹರಟುತ್ತಿದ್ದಾಗ ಅವಳ ಪೀಠಿಕೆ ಶುರುವಾಯಿತು. ನನಗೆ ಅರ್ಥವಾಗಿರಲಿಲ್ಲ.

‘ನೀನು ಅವಸರ ಮಾಡ್ಬೇಡಮ್ಮಾ, ವಿಷಯ ಏನೂಂತ ಹೇಳು. ಆಮೇಲೆ ನಿರ್ಧಾರಕ್ಕೆ ಬಾ’ – ಅಮ್ಮ ಧೈರ್ಯವಂತೆ, ಅವಳು ಹೇಳಿದ್ದನ್ನು ಅರಗಿಸಿಕೊಳ್ಳಲಾಗದೆ ಸಾಂತ್ವನಿಸಿದಳು ಅನಿಸಿತು. ಆದರೂ ವಿಷಯವನ್ನು ಕೇಳುವ ಧೈರ್ಯ ಮನೆಯಲ್ಲಿ ಯಾರಿಗೂ ಇರಲಿಲ್ಲ. ತೇಲಿ ಸಾಗುವ ಮುಗಿಲಿನಂತೆ ದಿನಗಳು ಸಾಗುತ್ತಿದ್ದವು. ಒಂದು ದಿನ ನಾನೇ ಅಮ್ಮನನ್ನು ವಿಚಾರಿಸಿದೆ.

‘ಅವಳಿನ್ನು ಗಂಡನ ಮನೆಗೆ ಹೋಗುವುದಿಲ್ಲ ಮಾರಾಯಾ. ಕಾರಣ ಕೇಳಿದರೆ ಅವಳು ಹೇಳುವುದಿಲ್ಲ. ಯಾರೂ ಏನೂ ಮಾತಾಡುವುದು ಬೇಡ’.

ಅಮ್ಮನೇ ಒಂದು ನಿರ್ಧಾರಕ್ಕೆ ಬಂದ ಮೇಲೆ ನನ್ನದೇನಿದೆ ಎಂದು ಸುಮ್ಮನಾದೆ. ಅವಳು ಮನೆಯಲ್ಲಿದ್ದರೂ ಖುಷಿಯೆನ್ನುವುದು ಅವಳ ಮುಖದಲ್ಲಿ ಕಾಣಿಸಲಿಲ್ಲ. ಸದಾ ಅಂತರ್ಮುಖಿಯಾಗಿಯೇ ಇರುತ್ತಿದ್ದಳು. ತನ್ನ ಮನಸ್ಸಿನಲ್ಲಿರುವುದು ಹೇಳಿಕೊಂಡರೆ ತಾನೆ ಹಗುರವಾಗುವುದು. ಅವಳು ಹೇಳುವುದೂ ಇಲ್ಲ, ಯಾರೂ ಅವಳನ್ನು ಕೇಳುವುದು ಇಲ್ಲ. ಒಲೆಗೆ ಅಂಟಿಕೊಂಡ ಕೆಂಡದಂತೆ ಮನೆಯ ಒಳಗೆ ಮೌನಿಯಾಗಿರುತ್ತಿದ್ದಳು. ಮನೆಗೆ ಯಾರು ಬಂದರೂ ಅವಳು ಮಾತಾಡುವುದು ಬಿಡಿ ಮುಖವನ್ನೂ ತೋರಿಸುವುದಿಲ್ಲ. ಅಕ್ಕಪಕ್ಕದ ಮನೆಯವರು ಯಾರಾದರೂ ಬಂದು ಅವಳ ಬಗ್ಗೆ ಕೇಳಿದರೆ ಅವರು ಹೋದ ಮೇಲೆ ಉರಿದು ಬೀಳುತ್ತಿದ್ದಳು. ‘ಅವರಿಗೆಂತಕ್ಕೆ ನನ್ನ ವಿಷಯ? ನಾನು ಗಂಡನ ಮನೆಗೆ ಹೋಗ್ತೇನೆ ಬಿಡ್ತೇನೆ, ನನ್ನಿಂದ ಅವರಿಗೆ ಕಷ್ಟವಾಗಿದಾ?’ ಸಿಟ್ಟಿನಿಂದ ಆಡುವುದು ಮಾತ್ರವಲ್ಲಾ ದಿನವಿಡೀ ಊಟ ತಿಂಡಿ ಬಿಟ್ಟು ಉಪವಾಸ ಹಿಡಿದವರಂತೆ ಕೂತುಬಿಡುತ್ತಿದ್ದಳು.

ಒಂದು ಹೆಣ್ಣು ಮಗು ಗಂಡನ ಮನೆಯಿಂದ ಒಬ್ಬಳೇ ಬಂದಾಗ, ತವರು ಮನೆಯಲ್ಲಿಯೇ ಉಳಿದಾಗ ನೆರೆಹೊರೆಯವರು ಕುತೂಹಲದಿಂದ

